ಹೊಲ–ಮನೆ ನೋಡಿಕೊಳ್ಳುತ್ತ ಊರಲ್ಲಿಯೇ ಉಳಿದಿದ್ದ. ಹೀಗಿದ್ದಾಗಲೇ ರಾಘ್ಯಾನಿಗೆ ಯಲ್ಲಮ್ಮನ ಪಾದಕಟ್ಟಿ 'ಜೋಗಮ್ಮನ' ಮಾಡೋದು ಗೊತ್ತಾಗಿ ನೋಡಲು ಅಗಸೀವರೆಗೆ ಓಡಿ ಬಂದಿದ್ದ.

ದೇವರು ಕಟ್ಟಿದ್ದ ದಾರ ಕೊರಳನ್ನು ದಾಟಿ ಎದೆಯ ಮೇಲೆ ಚಾಚಿಕೊಂಡಿತ್ತು.

ಎರಡು ಬಂಗಾರದ ತಾಳಿ ಬಟ್ಟು ಮತ್ತು ಒಂದು ಹಸುವಿನ ತೊಗಲಿನಿಂದ ಮಾಡಿದ ಯಲ್ಲವ್ವನ ಪಾದ ದಾರದಲ್ಲಿ ಮೆರೆಯುತ್ತಿದ್ದವು. ಮುಂಗೈ ತುಂಬಾ ಹಸಿರು ಬಳೆಗಳು ಕೈಗೆ ಹಚ್ಚಿಕೊಂಡಿದ್ದ ಮೆಹಂದಿಯೂ ಕಾಣದಂತೆ ಆವರಿಸಿದ್ದವು. ಕಾಲಿಗೆ ಕಾಲುಂಗರ, ಚೈನು, ತೋಳಬಂದಿ ಎಲ್ಲವನ್ನು ಹಾಕಿ ನೋಡಿದವರು ನೆದರು ಬಿಡುವಂತೆ ಸಿಂಗಾರ ಮಾಡಿದ್ದರು.

ರಾಘುವಿನ ಅವ್ವನಿಗಾಗಿ ವಾದಿ ಹುಡುಕಾಡಿದ. ಕಾಣಿಸಲಿಲ್ಲ. ಮೆರವಣಿಗೆಯನ್ನು ದಾಟಿ ರಾಘುವಿನ ಮನೆಯ ಹತ್ತಿರ ಸುಳಿದರೆ ಅಲ್ಲಿ ಅಷ್ಟೊ, ಇಷ್ಟೊ ಕಣ್ಣು ಕಾಣುತ್ತಿದ್ದ ಮಲ್ಲವ್ವ ಕುರುಡುಗಣ್ಣುಗಳಲ್ಲಿ ಕಣ್ಣೀರು ಹಾಕುತ್ತ ಕುಳಿತಿದ್ದಳು.

''ಮಲ್ಲವ್ವss'' ಅಂದ. ಎದೆಗೂಡಿನೊಳಗಿನ ಗಾಳಿಯನ್ನ ಒಟ್ಟು ಮಾಡಿ ದನಿಯಾಗಿಸಿ.

ವಾದಿಯ ದನಿ ಗುರುತು ಹಿಡಿದಳೋ ಏನೊ. ಕೈಚಾಚಿ, ಸವರಾಡಿ ಕೂಡ್ರುವಂತೆ ಕರೆದಳು.

ಹೋಗಿ ಬಗಲಲ್ಲಿ ಕುಳಿತ.

''ನೀನಾ ಕರಿಸಿದ್ದೇನು ಆ ಬ್ಯಾರೇ ಊರು ಜೋಗಮ್ಮೋರಿಗೆ, ರಾಘುಗ ಮುತ್ತು ಕಟ್ಟಾಕ'' ಅಂದ.

''ಕರ್ಸಾಕ, ಕಟ್ಟಾಕ ನಾ ಯಾರಪ ಧಣಿ? ಆ ಊರು ಬಸ್ವಿ ಯಲ್ಲವ್ವ ನನ ಕೂಸಿನ ಮ್ಯಾಲ ಕಣ್ಣಿತ್ತು, ಮಾಯಮಾಡಿ ಹಡ್ಲೆದಾಗ ಹಾಕ್ಯಂಡ್ಲು'' ಅಂತೇಳಿ ಕುಂತಲ್ಲೆ ಹಿಡಿ ಮಣ್ಣು ತೂರಿದಳು.

''ನಿಮ್ಮಾತಗ ರೊಕ್ಕ, ಆಸ್ತಿ ಮನಾರಿತ್ತು, ಅದಕ ಹಾರಾಡೋ ಹಕ್ಕೀನಾ ಕಟ್ಯಾಕಿದ. ನನಗೇನಾದ ಇವತ್ತುಂಡ್ರ ನಾಳೀಗಿ ಉಪಾಸ. ಅದಾಕ ಗುಬ್ಬಿ ಗೂಡು ಬಾಗ್ಲು ತೆಗ್ದು ಹಾರಾಕ ಬಿಟ್ಯಾ, ಹಂಗ ಹಾರಾದ್ರಾಗ ಅದ್ಕ ಸುಖ ಐತೆಂದ್ರ ಅದ್ನ ತಡಿಯಾಕ ನಾನ್ಯಾರು? ನೀನ್ಯಾರು?'' ಅಂತಂದಳು.

ಏನೂ ಓದದ ಬರೆಯದ ನಿರಕ್ಷರ ಕುಕ್ಷಿ ಮಲ್ಲವ್ವನಿಗೆ ಹೊಳೆದ ಸತ್ಯ ತಾತನೂ ಸೇರಿದಂತೆ ಮತ್ಯಾರಿಗೂ ಹೊಳೆಯಲಿಲ್ಲವಲ್ಲ ಅಂತನಿಸಿತು. ಹಾಗೆ ಎದೆ ಹೊಕ್ಕ ನೋವು ಕ್ಷಣ ಕ್ಷಣಕ್ಕೂ ಕಣ್ಣೊಳಗಿನ ಕಣ್ಣೀರಾಗಿ ಮನೆಯ ಹಾದಿ ಹಿಡಿದ.

ಒಂದು ದಿನವೂ ಹೊಡೆಯಲಿಲ್ಲ, ಬಡಿಯಲಿಲ್ಲ, ಧ್ವನಿ ಎತ್ತರಿಸಿ ಗದರಿಸಲಿಲ್ಲ. ಎತ್ತಿಕೊಂಡರೆ ಸಾಕು, ''ಯಪ್ಪ ನಮಪ್ಪ, ಬಂಗಾರ ಕೂಸು'' ಅಂತ ಮುದ್ದಿಸುತ್ತಿದ್ದ ಅಪ್ಪನನ್ನ ನಾನೇಕೆ ದೂರ ಮಾಡಿಕೊಂಡೆ ಅಂತ ಎಣಿಸಿದಷ್ಟು ಎದೆ ಭಾರ ಆಗತೊಡಗಿತು. ಮನೆಗೆ ಬಂದವನು ಕತ್ತಲ ಕೋಣೆ ಹೊಕ್ಕು ಬಾಗಿಲಾಕಿ, ''ಯಪ್ಪ ನೀ ನಮ್ಗ, ಅವ್ವಗ ನೋವ್ಕೊಟ್ಟೆ ಅನಕಂಡ್ವಿ, ಅದರ ನೂರು ಪಟ್ಟು ನೋವು ನೀ ಒಳಗಾ ಉಂಡಿದಿ, ಇದ್ದ ಬದ್ಕು ಬದಕಲಾರದ ಮಂದೀಗಿ ಹೆದ್ರೀ ಅಂತರ ಪಿಶಾಚಿಯಾಗಿ ಬಾಳೇವು ಮಾಡಿದ್ದಿ; ನಿನಗ ನಾವು ಬಿಡುಗಡೆ ಕೊಡ್ಲಿಲ್ಲಪೋ'' ಅಂತ ಜೋರಾಗಿ ಅಳತೊಡಗಿದ.

ಇವನ ಅಳು ಕೇಳಿ ಕಿಟಕಿಯಲ್ಲಿ ಗೂಡು ಕಟ್ಟಿದ್ದ ಗುಬ್ಬಿಗಳು ಮರಿಗಳ ಸಮೇತ ತಮ್ಮ ಪುಟ್ಟ ರೆಕ್ಕೆ ಪಟಪಟಿಸಿ ಹಾರಿ ಹೋದವು.

**ಶರಣಬಸವ ಕೆ. ಗುಡದಿನ್ನಿ**

ಪ್ರಾಥಮಿಕ ಶಾಲೆಯ ಶಿಕ್ಷಕ. ಪ್ರಕಟಿತ ಪುಸ್ತಕಗಳು: 'ಧಣೇರ ಬಾವಿ' (ಕಥಾಸಂಕಲನ), 'ಉಡದಾರ' (ಪ್ರಬಂಧ ಸಂಕಲನ). ರಾಯಚೂರು ಜಿಲ್ಲೆಯ ಲಿಂಗಸುಗೂರಿನಲ್ಲಿ ನೆಲೆಸಿದ್ದಾರೆ.